ಡಾ॥ ಆರ್. ನಾಗನಗೌಡ.—ಖಾನಗೀಯವರ ಹಿಡುವಳಿಯಲ್ಲಿರುವುದನ್ನು ಬಿಟ್ಟು ಪಬ್ಲಿಕ್ ಪ್ರಾಪರ್ಟಿ ಯಾಗಿರತಕ್ಕದ್ದರಲ್ಲಿ ಆ ರೀತಿ ಕಳ್ಳತನ ಆಗದಂತೆ ಅದನ್ನು ಚೆಕ್ ಮಾಡಲು ನೂಕ್ತ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಿದ್ದೇವೆ.

Trees in Sandoor Taluk (destruction on large scale).

Q.—521. Srimathi BELLARY SIDDAMMA (Davanagere).—

Will the Government be pleased to state :—

(*a*) whether it has come to their notice that the Government trees are being cut on a large scale in Sandoor Taluk ;

(*b*) the steps taken by them to prevent this ?

A.—Dr. R. NAGAN GOWDA (Minister for Agriculture).—

(*a*) No.

(*b*) Does not arise in view of reply to clause (*a*).

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನಂಡೂರು ತಾಲ್ಲೂಕಿನಿಂದ ದಿನಂಪ್ರತಿ 20-30 ಸೌದೆ ಗಾಡಿಗಳು ಬಳ್ಳಾರಿಗೆ ಹೋಗುತ್ತಿವೆ. ಸರ್ಕಾರಿ ಮರಗಳನ್ನು ಕಡಿದು ಆ ರೀತಿಯಾಗಿ ಸಾಗಿಸುತ್ತಿದ್ದಾರೆಂದು ವರ್ತಮಾನ ವಿದೆ. ಅದನ್ನು ತಾವು ಪರಿಶೀಲನೆ ಮಾಡಿದ್ದೀರಾ ?

*ಡಾ॥ ಆರ್. ನಾಗನಗೌಡ.—ಪರಿಶೀಲನೆ ಮಾಡಿದ್ದೇವೆ. ಕೆಲವು ತಿಂಗಳ ಕೆಳಗೆ ನಂಡೂರಿನಿಂದ ಸೌದೆ ಗಾಡಿಗಳು ಬಳ್ಳಾರಿಗೆ ಹಾಗೆ ಬರುತ್ತಿದ್ದುದು ನಿಜ. ಆ ಸೌದೆಗೆಲ್ಲಾ ಆ ನಂಡೂರು ರಾಜರಿಗೆ ಲೈಸೆನ್ಸ್ ಕೊಡ ರಾಗಿತ್ತು. ಅವರು ಆಗ ಆ ರೀತಿ ಸೌದೆ ಸಾಗಿಸು ತ್ತಿದ್ದುದು ನಿಜ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಅವರ ಲೈಸೆನ್ಸನ್ನು ತೋರಿಸಿ, ಬೇರೆ ಜನರು ಸರ್ಕಾರಿ ಮರಗಳನ್ನು ಕಡಿದು ಸಾಗಿಸುತ್ತಿದ್ದಾರೆಂಬ ವಿಷಯವನ್ನು ತಾವು ಪರಿಶೀಲನೆ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಆ ರೀತಿ ಆಗುವುದ ಕ್ಕೆಲ್ಲಾ ಅವಕಾಶವಿಲ್ಲ. ಅಲ್ಲಿ ನಮ್ಮ ಆಫೀಸರಗಳ ನ್ನಿಟ್ಟಿದ್ದೇವೆ. ಅವರು ಆ ರೀತಿ ಮರಗಳನ್ನು ಕಡಿಯು ಗೊಡುವುದಿಲ್ಲ. ಕಾವಲು ಕಾಯುತ್ತಿದ್ದಾರೆ.

ಶ್ರೀ ಕೆ. ಕೊಟ್ರಬಸವನಗೌಡ.—ಮಧ್ಯೆ ಸರ್ಕಾರಿ ಕಾಡಿದ್ದು ನುತ್ತಲೂ ನಂಡೂರು ರಾಜರ ಪ್ರೈವೇಟ್ ಕಾಡಿರುವುದರಿಂದ ಸರ್ಕಾರಿ ಅರಣ್ಯದಲ್ಲಿ ನಾಟಾ, ಇತ್ಯಾದಿಗಳ ಕಳ್ಳತನವನ್ನು ತಡೆಗಟ್ಟಲು ಸಾಧ್ಯವಾಗು ತ್ತಿಲ್ಲವೆಂದು ಸ್ಥಳೀಯ ಅಧಿಕಾರಿಗಳು ತಮಗೆ ವರದಿ ಮಾಡಿಲ್ಲವೇ ?

ಡಾ॥ ಆರ್. ನಾಗನಗೌಡ.—ತೊಂದರೆ ಇರ ಬಹುದು. ಇದ್ದರೂ ನಾವು ನಮ್ಮ ಕೆಲಸ ನಡೆಸಲೇ ಬೇಕು. ಆದರೆ ನಂಡೂರು ಮಹಾರಾಜರಿಗೆ ಇಂಡಿಯಾ ಸರ್ಕಾರದವರು ನನ್ನದು ಮೂಲಕ ಅಲ್ಲಿ ಕೆಲವು ಅರಣ್ಯ ಸಂಪತ್ತುಗಳನ್ನು ಬಿಟ್ಟುಕೊಟ್ಟಿದ್ದಾರೆ. ಅದನ್ನು ನಾವೀಗ ತಪ್ಪಿಸುವುದಕ್ಕೆ ಸಾಧ್ಯವಿಲ್ಲ.

Heggavadi State Forest (Release of land for grazing goats).

Q.—530. Sri H. K. SHIVARUDRAPPA (Gundlupet-Heggadadevankote).—

Will the Government be pleased to state :—

(*a*) whether a delegation of the villagers of Kunthakere and other villages in Gundlupet taluk had not waited on the Minister for Agriculture with a request to release some extent in Heggavadi State Forest for grazing goats ;

(*b*) whether the Forest Officers of the Mysore District have not inspected the spot in this connection ;

(*c*) whether they have received any report from the concerned officers ; if so, its details ;

(*d*) the steps taken by Government to relieve the people from this hardship ?

A.—Dr. R. NAGAN GOWDA (Minister for Agriculture).—

(*a*) Yes.

(*b*) The spot was inspected.

(*c*) A report was received by the Chief Conservator of Forests. Since the formation of State Forest in 1913 extensive areas had been released from nearby gomal lands for cultivation with the result that cultivation had extended right up to the demarcation line at the cost of grazing grounds. The release of lands in Heggavadi State Forest is unlikely to give adequate relief. In accordance with the National Forest Policy of India every acre under Forest has to be perpetuated in the national interests such as conservation of soil and supply of fuel, etc.

(*d*) Does not arise in view of reply to clause (*c*)

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾವು (ಡಿ) ಭಾಗಕ್ಕೆ ಕೊಟ್ಟಿರತಕ್ಕ ಉತ್ತರದಿಂದ ಆ ಪ್ರದೇಶದ ಜನರ ಕಷ್ಟನಿವಾರಣೆ ಆದಂತಾಯಿತೇ ?